ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಆ ಊರಿನ ಜನ 5 ಎಕರೆ 36 ಗುಂಟೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದಾರೆ. ಎರಡು ಎಕರೆ ಭೂಮಿ ಜ್ಯೂನಿಯರ್ ಕಾಲೇಜಿಗೆ ಸಾಕು ಹಾಗೂ ಮೂರು ಎಕರೆ 36 ಗುಂಟೆ ಪ್ರಥಮ ದರ್ಜೆ ಕಾಲೇಜಿಗೆ ಸಾಕಾಗುತ್ತದೆ. ಈ ಜಾಗ ಕಾಲೇಜಿಗೆ ಯೋಗ್ಯವಾಗಿರುವುದರಿಂದ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರು ಈ ಸ್ಥಳಕ್ಕೆ ಭೇಟಿ ನೀಡಿದ್ದಾಗ ಸ್ಪಾಟ್‌ನಲ್ಲೇ ಆರ್ಡರ್ ಮಾಡಿದರು. ಅಂದಿನ ಮುಖ್ಯ ಮಂತ್ರಿಗಳ ಆರ್ಡರ್ ಪ್ರಕಾರ ಅರ್‌ಕಿಟೆಕ್ಟನ್ನು ಕರೆಸಿ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿದ ಮೇಲೆ ಅವರು ನಕ್ಷೆಯನ್ನು ಸಹ ತಯಾರು ಮಾಡಿ ಇದು ಒಳ್ಳೆಯ ಸ್ಥಳವೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಈ ಭೂಮಿ ಊರಿನ ಹೊರಗಿದೆ, ಹಾಗು ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಕಾಗುವುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಈ ಎರಡು ಕಾಲೇಜುಗಳನ್ನು ಈ ಜಮೀನಿನಲ್ಲೇ ಕಟ್ಟಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೆಲವು ವಿಚಾರಗಳಲ್ಲಿ ಇಂಡಿವಿಜ್ಯೂಯಲ್ ಅಭಿಪ್ರಾಯ ತೆಗೆದುಕೊಂಡ ನಾವು ನಿರ್ಣಯವನ್ನು ತೆಗೆದುಕೊಳ್ಳಬಾರದು, ಏಕೆಂದರೆ, ಅದು ಪೊಲಿಟಿಕಲ್ ಡಿಸಿಷನ್ ಆಗಬಾರದು. ಅದನ್ನು ತಜ್ಞರ ಅಭಿಪ್ರಾಯಕ್ಕೆ ಬಿಡಬೇಕು. ಏನೇ ಆಗಲಿ, ನೀವು ಸೂಚನೆ ಕೊಟ್ಟಿದ್ದೀರಿ, ನಾನು ಶಿಕ್ಷಣ ನಿರ್ದೇಶಕರನ್ನು ಕಳುಹಿಸಿ ಇದರ ಬಗ್ಗೆ ವರದಿಯನ್ನು ತರಿಸಿ ನಂತರ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಪವರ್ ಟಿಲ್ಲರ್ಸ್ / ಟ್ರೈಲರ್‌ಗಳಿಗೆ ಅರ್ಹತಾ ಪ್ರಮಾಣ ಪತ್ರ ಹಾಗೂ ಮೋಟಾರು ವಾಹನ ತೆರಿಗೆಗಳಿಂದ ವಿನಾಯ್ತಿ.

1197 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ರೈತರು ಉಪಯೋಗಿಸುವ ಪವರ್ ಟಿಲ್ಲರ್ ಟ್ರೈಲರ್‌ಗಳ ಮೇಲೆ ತೆರಿಗೆ ವಿಧಿಸುತ್ತದೆಯೇ?

ಆ) ಹಾಗಿದ್ದಲ್ಲಿ, ವಿಧಿಲಾಗುತ್ತಿರುವ ತೆರಿಗೆ ಮೊತ್ತ?

ಇ) ಪವರ್ ಟಿಲ್ಲರ್ - ಟ್ರೈಲರುಗಳಿಗೆ ಅರ್ಹತಾ ಪತ್ರ (ಎಫ್.ಸಿ) ಪಡೆಯುವ ಅವಶ್ಯತೆ ಇದೆಯೆ?

ಈ) ಹಾಗಿದ್ದಲ್ಲಿ ಸರ್ಕಾರದ ಮುಂದೆ ಪವರ್ ಟಿಲ್ಲರ್ - ಟ್ರೈಲರ್‌ಗಳಿಗೆ ಎಫ್.ಸಿ. ಮತ್ತು ಮೋಟಾರು ವಾಹನ ತೆರಿಗೆಯಿಂದ ವಿನಾಯಿತಿ ನೀಡುವ ಪ್ರಸ್ತಾವನೆ ಇದೆಯೆ?

ಉ) ಇಲ್ಲವಾಗಿದ್ದಲ್ಲಿ ಅದಕ್ಕೆ ಕಾರಣಗಳು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಹೌದು.

1-4-90 ಅನ್ವಯವಾಗುವಂತೆ ವಾಹನದ ವಯೋಮಾನಕ್ಕನುಗುಣವಾಗಿ ಜೀವಾವಧಿ ತೆರಿಗೆ ವಿಧಿಸಲಾಗುತ್ತದೆ.

ಆ) ಅನುಬಂಧದಲ್ಲಿ ತೋರಿಸಿರುವಂತೆ.

ಇ) ಹೌದು.

ಈ) ಇಲ್ಲ.

ಉ) ಕೇಂದ್ರ ಮೋಟಾರು ವಾಹನ ಕಾಯ್ದೆ 88 ರ ನಿಯಮದ 39ರ ಪ್ರಕಾರ ಎಲ್ಲಾ ಮೋಟಾರು ವಾಹನಗಳನ್ನು ಕಡ್ಡಾಯವಾಗಿ ನೊಂದಾಯಿಸಲ್ಪಡಬೇಕಾಗಿದೆ. ನಿಯಮ 56ರ ಪ್ರಕಾರ ಎಲ್ಲಾ ಸಾರಿಗೆ ವಾಹನಗಳು " ಅರ್ಹತಾ ಪತ್ರ" ಪಡೆಯಬೇಕಾಗಿದೆ. ಆದುದರಿಂದ ರಾಜ್ಯಸರ್ಕಾರಕ್ಕೆ ಪವರ್ ಟಿಲ್ಲರ್-ಟ್ರೈಲರ್ ವಾಹನಗಳಿಗೆ ನೊಂದಣಿ ಹಾಗೂ ಅರ್ಹತಾ ಪತ್ರಗಳನ್ನು ಪಡೆಯುವುದರಿಂದ ವಿನಾಯಿತಿ ನೀಡಲು ಅಧಿಕಾರವಿರುವುದಿಲ್ಲ.

2. ಸರ್ಕಾರವು ವಾಹನಗಳ ವಯೋಮಾನಕ್ಕೆ ಅನುಗುಣವಾಗಿ, ಪವರ್ ಟಿಲ್ಲರ್ -ಟ್ರೈಲರ್‌ಗಳ ಮೇಲೆ ತೀರಾ ರೂ. 500-00 ರಿಂದ 50-00ವರೆಗಿನ ದರ ಮಾತ್ರ ವಿಧಿಸಿರುತ್ತದೆ.

3. ಇತರ ವಾಹನಗಳ ತೆರಿಗೆ ದರಗಳಿಗೆ ಹೋಲಿಸಿದರೆ ಪವರ್ ಟಿಲ್ಲರ್-ಟ್ರೈಲರ್ ಗಳಿಗೆ ವಿಧಿಸಿರುವ ತೆರಿಗೆಯು ತೀರಾ ಕಡಿಮೆ ಇರುತ್ತದೆ.

Item No.	*Class of Vehicles*	*Tractors*	Trailers	*Power Tiller Trailers*
1	2	3	4	5
Tractors Trailers and Power tiller Trailers specified in the second proviso to sub-section (1) of section 3.				
(A)	At the times of registration of new vehicles	1,500	500	500
(B) If the vehicle is already registered and its age from the month of registration is:				
1.	Not more than two years	1,400	470	470
2.	More than two years but not more than 3 years	1,300	440	440
3.	More than 3 years but not more than 4 years	1,200	410	410
4.	More than 4 years but not more than 5 years	1.100	380	380
5.	More than 5 years but not more than 6 years	1,100	350	350
6.	More than 6 years but not more than 8 years	900	320	320
7.	More than 7 years but not more than 8 years	800	290	290
8.	More than 8 years but not more than 9 years	700	260	260
9.	More than 9 years but not more than 10 years	600	230	230

10.	More than 10 years but not more than 11 years	500	200	200
11.	More than 11 years but not more than 12 years	400	170	170
12.	More than 12 years but not more than 13 years	300	140	140
13.	More than 13 years but not more than 14 years	300	110	110
14.	More than 14 years but not more than 15 years	300	80	80
15.	More than 15 years	300	50	50

Note : In respect of vehicles for which the tax due prior to the first day of April 1990 but has not been paid, such tax shall be collected at the rates existing prior to the first day of April 1990 "

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಭಾಧ್ಯಕ್ಷರೆ, ಈ ಪವರ್ ಟಿಲ್ಲರ್ ಮತ್ತು ಟ್ರೈಲರ್ಸ್‌ನ್ನು ಉಪಯೋಗ ಮಾಡುವವರು ನಮ್ಮ ರೈತರು. Power tillers trailers are used by the farmers and the Hon'ble Ministor has stated that there is no scope for exempting them. ತಮ್ಮದು ರೈತರ ಸರ್ಕಾರವೆಂದು ಹೇಳಿಕೊಳ್ಳುತ್ತೀರಿ. ರೈತರು ಗದ್ದೆಯಲ್ಲಿ ವ್ಯವಸಾಯ ಮಾಡುವುದನ್ನು ಬಿಟ್ಟು ಬೇರೆ ಕೆಲಸವನ್ನು ಮಾಡುವುದಿಲ್ಲ. ಆದ್ದರಿಂದ ಅವರಿಗೆ ಉಪಯೋಗ ಮಾಡಬೇಕಾಗುತ್ತದೆ. ಆದ್ದರಿಂದ ಇವುಗಳಿಗೆ ಟ್ಯಾಕ್ಸನ್ನು ಸಂಪೂರ್ಣವಾಗಿ ಎಗ್ಸಮ್ಪ್ಟ್ ಮಾಡುವುದಕ್ಕೆ ಇರುವ ತೊಂದರೆಯಾದರೂ ಏನೆಂದು ನಾನು ಕೇಳಬಯಸುತ್ತೇನೆ. ಎರಡನೆಯದಾಗಿ, ಫಿಟ್‌ನೆಸ್ ಸರ್ಟಿಫಿಕೇಟನ್ನು ಇನ್‌ಸಿಸ್ಟ್ ಮಾಡಿದ್ದೀರಿ. ಇದನ್ನು ನಾನೂ ಒಪ್ಪುತ್ತೇನೆ. ಏಕೆಂದರೆ, ಒಂದು ಆಕ್ಸಿಡೆಂಟ್ ಆದರೆ ಅದು ಸರಿಯಿತ್ತೋ ಇಲ್ಲವೋ ಎಂದು ತಿಳಿದುಕೊಳ್ಳಲು ಅದು ಬೇಕಾಗುತ್ತದೆ. ಈ ಫಿಟ್‌ನೆಸ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಬೇಕಾದರೆ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹೋಗಬೇಕಾಗುತ್ತದೆ. ಉದಾಹರಣೆಗೆ ಹಳ್ಯಾಲ್ ಬಾರ್ಡರ್ ನಲ್ಲಿರುವವರು ಈ ಸರ್ಟಿಫಿಕೇಟನ್ನು ತೆಗೆದುಕೊಳ್ಳಲು ನಿಮ್ಮ ಆಫೀಸ್ ಎಲ್ಲಿದೆಯೋ ಅಲ್ಲಿಗೆ ಹೋಗಬೇಕಾಗಿದೆ. ಏಕೆಂದರೆ ನಿಮ್ಮ ಅಧಿಕಾರಿಗಳು ಹಳ್ಳಿಮಟ್ಟದಲ್ಲಿ ಬರುವುದಿಲ್ಲ. ಆದ್ದರಿಂದ ನಿಮ್ಮ ಅಧಿಕಾರಿಗಳು ಮಂಡಲ ಮಟ್ಟದಲ್ಲಿ ಹೋಗಿ ಈ ಪವರ್ ಟಿಲ್ಲರ್ಸ್‌ನ್ನು ಉಪಯೋಗಿಸುವಂಥವರಿಗೆ ಅಲ್ಲಿಯೇ ಫಿಟ್‌ನೆಸ್ ಸರ್ಟಿಫಿಕೇಟನ್ನು ಕೊಡುವುದಕ್ಕೆ ಸಾಧ್ಯವಿಲ್ಲವೇ ಎಂದು ಕೇಳಬಯಸುತ್ತೇನೆ.

SRI AZIZ SAIT : Madam Deputy Speaker, Power-tillers as such are not attracted by tax. But when Trailers are fixed to the Power-tillers, then it is taxed. It cannot be exempted because it is a central Government Act. ಆಮೇಲೆ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಿ ಫಿಟ್‌ನೆಸ್ ಸರ್ಟಿಫಿಕೇಟ್ ಕೊಡಲು ತೊಂದರೆಯಾಗುತ್ತದೆ. ಅದಕ್ಕಾಗಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಅಥವಾ ಸಬ್ ಡಿವಿಜನ್‌ಗೆ ಒಬ್ಬ ಮೊಬೈಲ್ ಇನ್ಸ್‌ಪೆಕ್ಟರನ್ನು ಕಳುಹಿಸಿ ಫಿಟ್‌ನೆಸ್ ಸರ್ಟಿಫಿಕೇಟ್ ಕೊಡುವುದಕ್ಕೆ ಸಾಧ್ಯವೇ ಎಂಬುದರ ಬಗ್ಗೆ ಎಕ್ಸಾಮಿನ್ ಮಾಡಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಕೇಳುತ್ತಿದ್ದೇನೆ, ಸೆಂಟ್ರಲ್ ಗೌವರ್ನಮೆಂಟ್ ಇದಕ್ಕೆ ಟೋಟಲ್ ಎಕ್ಸಮ್ಪ್ಟ್ ಮಾಡಬಾರದೆಂದು ನಿಮಗೆ ಹೇಳಿಲ್ಲ. ಕೇಂದ್ರಸರ್ಕಾರದವರು

ರೈತರ ಹತ್ತಿರ ಇರುವ ಟ್ರೈಲರ್ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ನಿಮಗೆ ಆದೇಶ ಕೊಟ್ಟಿದ್ದಾರೆಯೇ? ಹಾಗೆ ಒಂದು ವೇಳೆ ಆದೇಶ ಕೊಟ್ಟಿದ್ದರೆ, 500 ರೂಪಾಯಿ ಹಾಕುವ ಬದಲು ನಾಮಿನಲ್ ಆಗಿ 5 ರೂಪಾಯಿ ಹಾಕಿ ಮುಗಿಸಬಹುದು. ನೀವು ಮಂಡಲ ಮಟ್ಟದಲ್ಲಿ ತೆರಿಗೆ ಹಾಕುವುದು ಕಷ್ಟವಾಗುತ್ತದೆಂದು ಹೇಳಿದಿರಿ. ನಿಮ್ಮ ಆಫೀಸ್ ಇರುವುದು ಸಬ್ ಡಿವಿಜನ್ ಮಟ್ಟದಲ್ಲಿ. ಎಷ್ಟು ಜಿಲ್ಲೆಗಳಲ್ಲಿ ನಿಮ್ಮ ಆಫೀಸರ್‌ಗಳು ಇದ್ದಾರೆ? ಹಳಿಯಾಲದಿಂದ, ಯಲ್ಲಾಪುರದಿಂದ, ಮುಂಡಗೋಡ್‌ನಿಂದ ಸೂಪದಿಂದ ಸಿರಸಿ ತನಕ ತೆಗೆದುಕೊಂಡು ಹೋಗಬೇಕು. ರೈತರು ಸುಮಾರು 150-200 ಕಿಲೋಮೀಟರ್ ದೂರ ಹೋಗಬೇಕು. ಅದರಲ್ಲೂ ಮಲೆನಾಡು ಪ್ರದೇಶದಲ್ಲಿ ಬಹಳ ತೊಂದರೆಯಿರುವುದರಿಂದ ಮಂಡಲ ಮಟ್ಟದಲ್ಲಿ ಮಾಡಿದರೆ ಸ್ವಲ್ಪ ಅನಾನುಕೂಲವಾಗಬಹುದು. ಒಂದು ಪಕ್ಷ ತೊಂದರೆ ಇದ್ದಲ್ಲಿ, ಅದನ್ನು ತಾಲ್ಲೂಕು ಮಟ್ಟದಲ್ಲಿ ಮಾಡಲು ಪ್ರಯತ್ನಪಡುವಿರೇನು?

SRI AZIZ SAIT : I think, I have stated what I wanted to say I will got it examined. Whether it is taluka level or sub-division level.

ಶ್ರೀ ಆರ್.ವಿ. ದೇಶಪಾಂಡೆ : ಎರಡನೆಯದು, ಟ್ಯಾಕ್ಸ್ ಬಗ್ಗೆ ಹೇಳಿ.

SRI AZIZ SAIT : Regarding Tax, it is the Central Government Act. ದಿನಾಂಕ 1.4.90 ರಿಂದ ಟ್ಯಾಕ್ಸ್ ವಿಧಿಸುವ ಬಗ್ಗೆ ಅನೆಕ್ಷರ್‌ನಲ್ಲಿ ಇರಬೇಕು. ಅದನ್ನು ನೋಡಿ. ರೂ.1500 ಇಳಿಮುಖವಾಗಿ ರೂ.300ಕ್ಕೆ ಬರುತ್ತದೆ.

ಶ್ರೀ ಸಿ. ಬೈರೇಗೌಡ : ನಿಮ್ಮ ವಯಸ್ಸು ಆದಾಗ ರೂ.300 ಆಗುತ್ತದೆ.

ಶ್ರೀ ಅಜೀಜ್ ಸೇಠ್ : ವಯಸ್ಸಿಗೂ ಇದಕ್ಕೂ ಏನು ಸಂಬಂಧ? ವಯಸ್ಸು ಬೆಳೆಯುತ್ತಾ ಬೆಳೆಯುತ್ತಾ ಎಲ್ಲ ಕಡಿಮೆಯಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಅವರು ಸರಿಯಾಗಿ ಉತ್ತರ ಕೊಡುತ್ತಿಲ್ಲ. ನಾನು ಏನು ಕೇಳುತ್ತಿದ್ದೇನೆಂದರೆ ಸೆಂಟ್ರಲ್ ಗೌವರ್ನಮೆಂಟ್‌ನಿಂದ ಟ್ಯಾಕ್ಸ್ ವಿಧಿಸುವ ಬಗ್ಗೆ ಏನಾದರೂ ಆದೇಶ ಇದೆಯೇ? ಆದೇಶ ಇದ್ದರೆ ನೀವು 500 ರೂಪಾಯಿಗಳನ್ನು ಹಾಕುವ ಬದಲು 5 ರೂಪಾಯಿ ಹಾಕಿ ರೈತರಿಗೆ ಏಕೆ ಅನುಕೂಲ ಮಾಡಿಕೊಡಬಾರದು. ಇದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಿ.

SRI AZIZ SAIT : I will get it examined.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಯಾವುದೇ ಕೇಂದ್ರ ಸರ್ಕಾರ ನಿಯಮಾನುಸಾರ ಇವರಿಗೆ ಎಗ್ಜಮ್ಪ್ಟ್ ಮಾಡಬಾರದು ಅಥವಾ ಟ್ಯಾಕ್ಸ್ ಇಷ್ಟು ಹಾಕಬೇಕೆಂದು ಮೋಟಾರ್ ವೆಹಿಕಲ್ಸ್ ಆಕ್ಟ್‌ನಲ್ಲಿ ಹೇಳಿಲ್ಲ. You have been the Transport Minister thrice. I do not know you are not having the knowledge about that.

ಶ್ರೀ ಆರ್.ವಿ. ದೇಶಪಾಂಡೆ : ಮಂತ್ರಿಗಳಿಗೆ ಬೀಡಿ ಕಾರ್ಮಿಕರ ಸಮಸ್ಯೆ ಬಗ್ಗೆ ಒಲವಿದೆ. ರೈತರ ಸಮಸ್ಯೆ ಬಗ್ಗೆ.....

ಶ್ರೀ ಅಜೀಜ್ ಸೇಠ್: ರೈತರ ಬಗ್ಗೆ ನನಗೆ ಇರುವಷ್ಟು ಕಳಕಳಿ ಬಹುಶಃ ಯಾರಿಗೂ ಇಲ್ಲ. ಇವರೆಲ್ಲಾ ಜಮೀನ್ದಾರರು. 100-200 ಎಕರೆ ಜಮೀನನ್ನು ರೈತರಿಗೆ ಬಿಟ್ಟು ಕೊಟ್ಟಿದ್ದೇನೆ. ಒಂದು ಎಕರೆ ಜಮೀನು ಇಲ್ಲ. ಇವ್ವೊತ್ತು 100 ಎಕರೆ ಜಮೀನು ಇಟ್ಟುಕೊಂಡವರು ಇದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ನಾವು ಜಮೀನ್ದಾರರಾಗಿದ್ದುದು ನಿಜ. ಜಮೀನೆಲ್ಲಾ ಹೋಗಿ ಈಗ ದಾರ ಮಾತ್ರ ಉಳಿದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಫಿಟ್‌ನೆಸ್ ಸರ್ಟಿಫಿಕೇಟ್ ಕೊಡಲಿಕ್ಕೆ ಸಬ್ ಡಿವಿಜನ್ ಮಟ್ಟದಲ್ಲಿ ಅವಕಾಶ ಇದ್ದರೆ ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದ್ದಾರೆ. ಬಹುಶಃ ಇದು ನಿಮಗೆ ಗೊತ್ತಿಲ್ಲ. Camps are conducted in every taluka. ಹಿಂದೆ ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಒಂದು ಸಣ್ಣ ಫೈಲನ್ನು ಬಿಲ್ಡ್-ಅಪ್ ಮಾಡಿಸಿದ್ದೆ. ಒಂದು ಪ್ರಪೋಸಲ್ ಕೂಡಾ ಬಂದಿತ್ತು. ರೈತ ಸಂಘದವರು ಪ್ರಪೋಸಲ್ ಮಾಡಿದ್ದರು. ಪವರ್ ಟ್ರ್ಯಾಕ್ಟರ್ ಮತ್ತು ಪವರ್ ಟ್ರೈಲರ್‌ಗಳಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ಬೇಕಾಗಿಲ್ಲ. ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗದೇ ಹೋದರೆ ರೈತರೇ ಅದನ್ನು ಬಿಸಾಕಿ ಬಿಡುತ್ತಾರೆ. ಕ್ಯಾನ್ಸೆಲ್‌ನಿಂದ ಏನಾಗುತ್ತದೆಂದರೆ ಕಲೆಕ್ಷನ್ ಅನುಕೂಲವಾಗುತ್ತದೆ. ಆದ್ದರಿಂದ, ಫಿಟ್‌ನೆಸ್ ಸರ್ಟಿಫಿಕೇಟ್ ಏಕೆ ಕ್ಯಾನ್ಸಲ್ ಮಾಡಬಾರದು ಎಂದು ಕೇಳುತ್ತಿದ್ದೇನೆ.

SRI AZIZ SAIT : I will get it examind. I am not here to harass the ryots. If I could help the ryots, I will be the firstman to take the credit myself and I will never allow you to take that credit.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಮಂತ್ರಿಗಳು ಕೊಟ್ಟಿರುವಂಥ ತೆರಿಗೆ ಪಟ್ಟಿಯನ್ನು ನೋಡಿದ ಮೇಲೆ ಅವರಿಗೆ ನಾನು ಒಂದು ಪ್ರಶ್ನೆ ಹಾಕಬೇಕು. ಎತ್ತಿನಗಾಡಿ ಏತಕ್ಕೆ ನಿಮ್ಮ ಕಣ್ಣಿಗೆ ಬಿದ್ದಿಲ್ಲ. ತಾವು ಎತ್ತಿನಗಾಡಿಗೆ, ಚಕ್ಕಡಿಗೆ ತೆರಿಗೆ ಹಾಕುವ ಮನಸ್ಸು ಏಕೆ ಮಾಡಿಲ್ಲ. ಇದನ್ನು ತಾವು ವಿಶ್ಲೇಷಣೆ ಮಾಡುತ್ತೀರಿ. Tractor power tillers ಅನ್ನು ಟ್ರಾನ್ಸ್‌ಪೋರ್ಟ್ ವೆಹಿಕಲ್ಸ್ ಎಂದು ವಿಶ್ಲೇಷಣೆ ಮಾಡುತ್ತೀರಿ. They are not transport vehicles. They are agricultural implements. They are tools of production. ಅವುಗಳ ಮೇಲೆ ತೆರಿಗೆಯನ್ನು ಹಾಕುತ್ತಿದ್ದೀರಿ. ಇದು ಎತ್ತಿನಗಾಡಿ ಮೇಲೆ ತೆರಿಗೆ ಹಾಕಿದಷ್ಟೇ ಅವಿವೇಕತನ, ಅವೈಜ್ಞಾನಿಕ ದಯವಿಟ್ಟು ಇದನ್ನು ಕೈಬಿಡುತ್ತೇವೆಂದು ರಾಜ್ಯದ ರೈತರಿಗೆ ಭರವಸೆ ಕೊಡಬೇಕು.

SRI AZEEZ SAIT : I fully endorse the views of my learned friend and colleague of socialist party at that time. The anxiety what he is having I could very well understand. ಎತ್ತಿನಗಾಡಿ ಟ್ಯಾಕ್ಸ್ ಹಾಕಿ ಎಂದು ನಾವು ಹೇಳುವುದಿಲ್ಲ. ಆಕ್ಸಿಡೆಂಟ್ ಅವಾಯ್ಡ್ ಮಾಡಲಿಕ್ಕೆ ಒಂದು ದೀಪ ಹಾಕಿಕೊಳ್ಳಬೇಕು. ದೀಪ ಇಟ್ಟುಕೊಂಡರೆ ಆಕ್ಸಿಡೆಂಟ್ ಆಗುವುದಿಲ್ಲ. ಪವರ್ ಟಿಲ್ಲರ್‌ಗೆ, ಫಿಟ್‌ನೆಸ್ ಸರ್ಟಿಫಿಕೇಟ್ ಆಗಲಿ, ಟ್ಯಾಕ್ಸ್ ಆಗಲಿ, ಇದು ಅಗ್ರಿಕಲ್ಚರಲ್ ಇಂಪ್ಲಿಮೆಂಟ್ I do agree that it is advanced agricultural implement. It could be treated like that. I share and I assure the hon.Members in this House that I will examine it and if there is any scope for it, I will be the first man to do it and take that credit to myself, ಎಂದು ಹೇಳಿದೆ.

ಪ್ರೌಢಶಾಲಾ ಶಿಕ್ಷಕರಿಗೆ ಬಡ್ತಿ ನೀಡುವುದು.

116 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪ್ರೌಢಶಾಲೆಗಳಲ್ಲಿ ಒಟ್ಟು ವಿಶೇಷ ಶಿಕ್ಷಕರುಗಳ ಸಂಖ್ಯೆ ಎಷ್ಟು ?

ಆ) ಸದರೀ ಶಿಕ್ಷಕರು ಯಾವ ಯಾವ ವಿಷಯಗಳಲ್ಲಿ ಪರಿಣಿತಿ ಹೊಂದಿರುತ್ತಾರೆ.